ಬೆಲೆ ರೂ.2.50

# ಶ್ರೀ ಶಾರದಾ

ಮಾಸಪತ್ರಿಕೆ - 15 ಜೂನ್ 2008

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.

*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*

ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-8 ಸಂಚಿಕೆ-6 ಪುಟಗಳು-8 Registered Under No.KA/SK/UDP/1260/2006-2008 Dated from 01-01-2006 to 31-12-2008.

## ಶ್ರೀ ಸುಬ್ರಹ್ಮಣ್ಯ ಸಭಾ-ಮಂಗಳೂರು ''ನೂರು ಹೆಜ್ಜೆ'' ವೈಭವ

ಶ್ರೀ ಸುಬ್ರಹ್ಮಣ್ಯ ಸಭೆಯ ಶತಮನೋತ್ಸವದ ಆಚರಣೆಯ ಪೂರ್ವಭಾವಿಯಾಗಿ ಶ್ರೀ ಶಂಕರ ಜಯಂತಿ ಕಾರ್ಯಕ್ರಮವು ತಾ.10-05-2008ರಂದು ಶ್ರೀ ಸುಬ್ರಹಣ್ಯ ಸಭಾಭವನದಲ್ಲಿ ಜರಗಿತು.

ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಆಚಾರ್ಯ ಶಂಕರರ ಪೂಜೆ ಅಂದು ಆಯೋಜಿಸಲ್ಪಟ್ಟಿತ್ತು.

ವಿಷ್ಣು ಸಹಸ್ರನಾಮ, ಶ್ರೀ ಲಲಿತಾ ಸಹಸ್ರನಾಮ ಪಾರಾಯಣದೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮಕ್ಕೆ ಕು. ಸುಭಾಷಿಣಿ ಎನ್. ಎಸ್. ಅವರ ಶಾಸ್ತ್ರೀಯ ಸಂಗೀತ ಮೆರುಗನ್ನು ಕೊಟ್ಟಿತು. ಮೈಸೂರಿನಲ್ಲಿ ಬಿ.ಎ.ಎಂ.ಎಸ್. ವ್ಯಾಸಂಗ ಮಾಡುತ್ತಿರುವ ಈಕೆಯ ಸಂಗೀತಕ್ಕೆ ಪಕ್ಕವಾದ್ಯ, ರಿದಂ ಪ್ಯಾಡ್ ಮೂಲಕ ಸಹಕಾರ ನೀಡಿದವರು ಶ್ರೀ ಸಾಯಿನಾರಾಯಣ ಕಲ್ಮಡ್ಕ. ಶ್ರೀಮತಿ ಸಾಧನಾ ಪ್ರತಾಪ್ ಹಾಗೂ ಶ್ರೀಮತಿ ಶಾರದಾ ಪ್ರಸಾದ್‌ರವರ ವೀಣಾವಾದನ ಕಾರ್ಯಕ್ರಮ ರಂಜನೀಯವಾಗಿ ಮೂಡಿಬಂತು.

ಆ ಬಳಿಕ ಶ್ರೀಮತಿ ರಜನಿ ಸಂತೋಷ್ ಅವರ ವೇಣುವಾದನ ಕಾರ್ಯಕ್ರಮ ಸಭಿಕರನ್ನು ಯಶಸ್ವಿಯಾಗಿ ಆಕರ್ಷಿಸಿತು. ಈ ಕೊಳಲುವಾದನ ಕಾರ್ಯಕ್ರಮಕ್ಕೆ ಸಹಕಾರ ನೀಡಿದವರು. :

ಮೃದಂಗ - ಶ್ರೀ ಮನೋಹರ್, ಖಂಜೀರ - ಮಾಸ್ಟರ್ ಮನೋಜ್ ಮತ್ತು ಶ್ರೀ ರಘುವೀರ್, ಮೊದಲಾದವರು. ಸಭಿಕರಿಗೆ ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಎಂ.ಆರ್. ವಾಸುದೇವ, ಆಚಾರ್ಯ ಶಂಕರರ ತತ್ವವನ್ನು ಶ್ರುತ ಪಡಿಸಿದರು. ಮುನ್ನೂರಕ್ಕೂ ಮಿಕ್ಕಿದ ಸಮಾಜ ಬಾಂಧವರ ಸಮ್ಮುಖದಲ್ಲಿ ಮಹಾಮಂಗಳಾರತಿ ನಡೆಯಿತು. ಪ್ರಸಾದ ಭೋಜನದ ಬಳಿಕ ಮರುದಿನದ



ಕಾರ್ಯಕ್ರಮಗಳಾದ ಗಣಹೋಮ, ಸುಬ್ರಹ್ಮಣ್ಯ ಹೋಮ, ನವಗ್ರಹ ಹೋಮ, ಜಗದ್ಗುರುಗಳ ಮೆರವಣಿಗೆಯ ಬಗ್ಗೆ ಚರ್ಚಿಸಿ ಎಲ್ಲರೂ ವಿರಮಿಸಿದರು.

**ತಾ.16-05-2008**

ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಶತಮಾನೋತ್ಸವ ಸಂಭ್ರಮದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಮಾಜಿಕ ಕಾರ್ಯಕ್ರಮಗಳು ತಾ.16-05-2008 ರಂದು ಶ್ರೀ ಅನಂತಕೃಷ್ಣ ಅಧ್ಯಕ್ಷರು, ಕರ್ನಾಟಕ ಬ್ಯಾಂಕ್ ಇವರಿಂದ ವಿದ್ಯುಕ್ತವಾಗಿ ದೀಪ ಬೆಳಗಿಸಿ ಉದ್ಘಾಟಿಸಲ್ಪಟ್ಟಿತು.

''ಬ್ರಾಹ್ಮಣರು ಮಿಸಲಾತಿಯ ಆಮಿಷಕ್ಕೆ ಒಳಗಾಗಬಾರದು. ಹಿಂದೆ ಲೆಕ್ಕ ಬರೆಯುವ ಕೆಲಸವನ್ನು ಮಾಡಿರಬಹುದು. ಮುಂದೆ ನಮ್ಮ ಲೆಕ್ಕಗಳನ್ನು ಬರೆಯಲು ಬೇರೆಯವರನ್ನು ನೇಮಿಸುವ ಹಾಗೆ ಆಗಬೇಕು. ನಾವು ಅಲ್ಪರಾಗಬಾರದು. ತಲೆ ಎತ್ತಿ ನಡೆಯಬೇಕು. ಸಮಾಜದಿಂದಲೇ ನಮ್ಮ ಬ್ಯಾಂಕ್ ಬೆಳೆದಿದೆ. ಹಾಗಾಗಿ ಸುಬ್ರಹ್ಮಣ್ಯ ಸಭೆಗೆ ನೀಡಿದ ದೇಣಿಗೆ ಸಮಾಜಕ್ಕೆ ಬ್ಯಾಂಕ್ ನೀಡಿದ ದೇಣಿಗೆ. ಶತಮಾನೋತ್ಸವದ ಸಂಭ್ರಮದಲ್ಲಿರುವ ಈ ಸುಬ್ರಹ್ಮಣ್ಯ ಸಭೆ ಬೆಳೆದು ಸಹಸ್ರಮಾನ ಸಂಭ್ರಮವನ್ನು ಆಚರಿಸುವ ಹಾಗೆ ಆಗಲಿ ಎಂದು ಶ್ರೀ ಅನಂತಕೃಷ್ಣ ಹಾರೈಸಿದರು.

ಈ ಸಂದರ್ಭದಲ್ಲಿ ಶತಮಾನೋತ್ಸವದ ಸವಿನೆನಪಿಗಾಗಿ 'ನೂರು ಹೆಜ್ಜೆ' ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಎಂ.ಎಸ್. ರಘುನಾಥರಾವ್ ಸಂಪಾದಕರಾಗಿ ಈ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸುವಲ್ಲಿ ಸಹಕರಿಸಿದ್ದು, 'ನೂರು ಹೆಜ್ಜೆ'' ಬಗ್ಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಶತಮನೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಎಂ.ಆರ್. ವಾಸುದೇವ 'ಇಂತಹ ಕೆಲಸಗಳು ಒಬ್ಬನಿಂದ ಆಗುವಂತಹುದಲ್ಲ! ಒಳ್ಳೆಯ ಕೆಲಸ ಮಾಡಿದ್ದೀರಿ ಎಂದಾಗ ಸಂತೋಷವಾಗುತ್ತದೆ. ನಮ್ಮ ನಡುವೆ ಇರುವ ಪ್ರಗತಿಶೀಲ ವ್ಯಕ್ತಿಗಳನ್ನು ಸಮಾಜಕ್ಕೆ ತೋರ್ಪಡಿಸಬೇಕಾಗುತ್ತದೆ. ಎಲ್ಲರನ್ನು ಗುರುತಿಸಲಾಗದಿದ್ದರೂ ಸಾಧ್ಯವಿರುವಷ್ಟು ಮಟ್ಟಿಗೆ ಆ ಕೆಲಸ ಮಾಡಿದ್ದೇವೆ. ತಪ್ಪಾಗಿರಬಹುದು. ಯಾಕೆಂದರೆ ಯಾವ ಕೆಲಸಗಳಲ್ಲಿಯೂ ತಪ್ಪಾಗದೇ ಇರುವ ಸಾಧ್ಯತೆಗಳೇ ಇಲ್ಲ. ಶ್ರೀ ಅನಂತಕೃಷ್ಣ ನಮ್ಮ ಮನವಿಗೆ ಸ್ಪಂದಿಸಿ ಐದು ಲಕ್ಷ ರೂಪಾಯಿ ನೀಡಿದರು. ಅವರಿಗೆ ಕೃತಜ್ಞತೆಗಳು. ಅದೇ ರೀತಿ ತಾವೆಲ್ಲಾ ತನು-ಮನ-ಧನಗಳಿಂದ ಸಭೆಗಾಗಿ ದುಡಿದಿದ್ದೀರಿ. ನಿಮ್ಮ ಉದಾರತೆಯಿಂದ ಈ ಕಾರ್ಯಗಳು ಸಾಧ್ಯವಾದವು. ಜಗದ್ಗುರುಗಳು ಬಂದು, ಹೋಮಹವನಗಳು ಜರಗಿದವು. ಇವೆಲ್ಲಾ ಧಾರ್ಮಿಕ ಕಾರ್ಯಕ್ರಮಗಳ ಬಳಿಕ ಇನ್ನು ಮುಂದೆ ಸಾಂಸ್ಕೃತಿಕ ಕಾರ್ಯಗಳು ಜರಗಲಿವೆ. ಕಲೆಯು ನಮ್ಮನ್ನು ಮಾನವತ್ವದಿಂದ ದೇವತ್ವದೆಡೆಗೆ ಒಯ್ಯುತ್ತದೆ. ಆತ್ಮ (ಪರ್‌ಫೆಕ್ಷನ್) ನೆಡೆಗೆ ಸಾಗುತ್ತದೆ. ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜದಲ್ಲಿ ಗಣನೀಯ ಸಾದನೆಗೈದ ಗಣ್ಯರನ್ನು ಸನ್ಮಾನಿಸಲಾಯಿತು. ಸನ್ಮಾನಗೊಂಡವರು:

ಶ್ರೀಮತಿ ಲಲಿತಾರಾವ್ - ರಾಜಕಾರಣ
ಶ್ರೀ ಹರಿಶ್ಚಂದ್ರನ್ - ಸಂಗೀತ
ಶ್ರೀ ಅಡೂರು ಶ್ರೀಧರರಾವ್ - ಯಕ್ಷಗಾನ
ಶ್ರೀ ಸಂಜೀವರಾವ್ ಬಿ.ಎಂ. - ವಾಣಿಜ್ಯ
ಶ್ರೀ ಎಲ್ಲೂರು ಶ್ರೀಧರರಾವ್ - ಸಮಾಜಸೇವೆ
ಶ್ರೀ ಪದ್ಮನಾಭ ಭಂಡಿ - ಕ್ರೀಡೆ
ಶ್ರೀ ಕೆ. ವಿ. ರಮೇಶ್ - ಯಕ್ಷಗಾನ ಗೊಂಬೆಯಾಟ

(4ನೇ ಪುಟಕ್ಕೆ ...)

## ಉಡುಪಿ ಜ್ಞಾನಮಂದಿರದಲ್ಲಿ ಯತಿದ್ವಯರ ಸಮಾಗಮ

## ''ಸೌಂದರ್ಯಲಹರಿ ಕೋಟ್ಯಾರ್ಚನೆ'' ಪೂರ್ವಭಾವಿ ಸಭೆ

**ತಾ.7-6-2008ರಂದು ಶನಿವಾರ ಉಡುಪಿ ಕುಂಜಿಬೆಟ್ಟು ಶ್ರೀ ಜ್ಞಾನಮಂದಿರದಲ್ಲಿ ಎಡತೊರೆ ಮಠಾಧೀಶರಾದ ಪರಮಪೂಜ್ಯ ಶ್ರೀ ಶಂಕರ ಭಾರತೀ ಸ್ವಾಮಿಗಳು ಹಾಗೂ ಬಾಳೆಕುದ್ರು ಶ್ರೀ ಮಠದ ಮಠಾಧೀಶ ಪರಮ ಪೂಜ್ಯ ಶ್ರೀ ಶ್ರೀ ನೃಸಿಂಹಾಶ್ರಮ ಸ್ವಾಮಿಗಳು ಪರಸ್ಪರ ಭೇಟಿಯಾಗಿ ವಿಚಾರ ವಿನಿಮಯ ನಡೆಸಿದರು.**

ತಾ.7-12-2008ರಂದು ನಾಡಿನಾದ್ಯಂತ ಶ್ರೀಮದ್ ಶಂಕರಾಚಾರ್ಯ ವಿರಚಿತ ಸೌಂದರ್ಯ ಲಹರಿ ಸ್ತೋತ್ರದ 'ಕೋಟ್ಯರ್ಚನೆ'ಯ ಕಾರ್ಯಕ್ರಮವು ನೆರವೇರಲಿದ್ದು ಅದಕ್ಕಾಗಿ ಯತಿದ್ವಯರು ಉಡುಪಿ ಪ್ರಾಂತ್ಯದ ಅದ್ವೈತಾನುಯಾಯಿಗಳ ಮುಖಂಡರ ಸಭೆ ಕರೆದು ಮುಂದಿನ ಕೆಲಸ ಕಾರ್ಯಗಳ ಬಗ್ಗೆ ನಿರ್ದೇಶನ ನೀಡಿದರು ಹಾಗೂ ಸೌಂದರ್ಯ ಲಹರಿ ಸ್ತೋತ್ರದ ಮಹಿಮೆಯನ್ನು ಸವಿಸ್ತಾರವಾಗಿ ವಿವರಿಸಿದರು. ಅಲ್ಲದೆ ಈ ಪುಣ್ಯ ಕಾರ್ಯದಲ್ಲಿ ಎಲ್ಲ



ಅದ್ವೈತಾವಲಂಬಿಗಳು ಪಾಲ್ಗೊಂಡು ಪುನೀತರಾಗಬೇಕೆಂದು ಕರೆ ನೀಡಿದರು.

ಸೌಂದರ್ಯ ಲಹರಿ ಸ್ತೋತ್ರದ ಸಾಮೂಹಿಕ ಪಠಣದಿಂದ ಆರಂಭಗೊಂಡ ಕಾರ್ಯಕ್ರಮದಲ್ಲಿ ಮೊದಲಿಗೆ ಡಾ। ಪಾದೇಕಲ್ಲು ವಿಷ್ಣು ಭಟ್ಟರು ಸ್ವಾಗತಿಸಿದರು. ವಿದ್ವಾನ್ ಶ್ರೀ ಪರಮೇಶ್ವರ ಭಟ್ಟ ಹಾಸನ ಇವರು ಸ್ತೋತ್ರಾರ್ಚಿಸಲು ವಿಧಿವಿಧಾನ ವಿವರಿಸಿದರು. 'ವೇದಾಂತ ಭಾರತೀ' ಸಂಸ್ಥೆಯ ನಿರ್ದೇಶಕರಾದ ಡಾ। ಶ್ರೀಧರ ಭಟ್ಟ ಐನಕೈ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಸ್ಥಳೀಯ ಸ್ಥಾನಿಕ ದ್ರಾವಿಡ ಸಂಘ (ರಿ.), ಹವ್ಯಕ ಸೀಮಾ ಪರಿಷತ್ ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಈ ಕಾರ್ಯಕ್ರಮವನ್ನು ಸೀಮಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಡಿ.ಎಸ್.ಹೆಗಡೆಯವರು ನಿರ್ವಹಿಸಿ, ಮಹಿಳಾ ಪರಿಷತ್ತಿನ ಅಧ್ಯಕ್ಷೆ ಶ್ರೀಮತಿ ಶಂಕರಿ ರಾಮಭಟ್ಟ ವಂದಿಸಿದರು. ಮೈಸೂರು, ತೀರ್ಥಹಳ್ಳಿ, ಬಾರಕೂರು ಸಮಿತಿಗಳ ಪದಾಧಿಕಾರಿಗಳು ಉಪಸ್ಥಿತರಿದ್ದು ಸಹಕರಿಸಿದರು.

ವರದಿ : **ಡಿ.ಎಸ್.ಹೆಗಡೆ**